## ಮರು ಓದು

‘ಮಳೆಯಂಥ ಮಳೆಯಿಂದಲೇ’ ಈ ಒಡಲಬೇಗೆ ‘ಕಳೆಯಲು’, ತಂಪಾಗಿಸಲು, ಕಾರ್ಮೋಡವನ್ನು ಕರಗಿಸಲು ಸಾಧ್ಯವಿಲ್ಲ. ಮೋಡದಿಂದ ಬಿದ್ದ ಆಲಿ ಒಂದು ಗುಡ್ಡೆಯಾಗಿ ಅದು ಹಿಮಾಲಯವೇ ಆಗಿದೆ. ಅಂಥ ಹಿಮಾಲಯವ ಕರಗಿಸಿ ಹರಿಯಬೇಕು. ಅದರಡಿ ತಣ್ಣಗೆ ಕಣ್ಮುಚ್ಚಬೇಕು. ‘ಎಚ್ಚತ್ತು ನೀರಾಗಿ ಹರಿಯಬೇಕು’ ಎಂಬ ಬಹುದೊಡ್ಡ ಆಶಯವಿದೆ.

ಹಿಮಾಲಯವನ್ನು ಕವಿಗಳು ಒಬ್ಬೊಬ್ಬರು ಒಂದೊಂದು ರೀತಿ ಗ್ರಹಿಸಿದ್ದಾರೆ. ಬರಗೂರು ರಾಮಚಂದ್ರಪ್ಪ ಅವರು ‘ನೆತ್ತರಲ್ಲಿ ನೆಂದ ಹೂ’ನಲ್ಲಿ ‘ಬೇಗೆಯೇ ಬೆಟ್ಟವಾಗಿ ಉತ್ತರಕ್ಕೆ ಕಾವಲು, ಬೆವರೆಲ್ಲ ನದಿಗಳಾಗಿ ಮೂರು ದಿಕ್ಕು ಕಡಲು’ ಎಂದರೆ, ಕೇಬಿಯವರ ಕಾವ್ಯದಲ್ಲಿ ‘ಕರುಳ ವ್ಯಸನ ಮಾಂಸಪರ್ವತ’ವಾಗಿದೆ. ಆ ‘ಮಾಂಸಪರ್ವತ ಚೂರುಚೂರು ದಿಕ್ಕು ದಿಕ್ಕಿಗೂ ಪಾಲು’ ಅನೇಕ ಬಗೆಯಲ್ಲಿ ಹಿಮಾಲಯ ಕಾಣುತ್ತಿದೆ.

ಪ್ರಸ್ತುತ ಈ ಕವಿತೆಯಲ್ಲಿ ‘ಆಲಿ’ ಇದ್ದಿಲಾಗುತ್ತಿದೆ. ಮಳೆಗೆ ಹೊಳೆಯಾಗುವ ಗುಣವಿದೆ. ಕಡಲಾಗಿ ಉಕ್ಕುವ ಶಕ್ತಿಯಿದೆ. ಹಸಿರು ನಾಲಗೆಯಾಗುತ್ತದೆ, ಬೆಟ್ಟಗುಡ್ಡಗಳೇ ಪಾಚಿಗಟ್ಟುವಂತೆ ಸುರಿಯುತ್ತದೆ. ಹಾಗೆಯೇ ಮಳೆಯೇ ‘ಇದ್ದಿಲಾಗುವ ಹಿಮಾಲಯವ ಹೆರು’ ಎಂದು ಕವಿ ಆಶಿಸುತ್ತಾನೆ. ಆದರೆ ‘ಇದ್ದಿಲಾಗದ ಆಲಿ’ಯನ್ನು ಹಿಮಾಲಯವಾಗಿಸುತ್ತದೆ. ಅದು ಇದ್ದಿಲಾಗದಿದ್ದರೆ ಅದರ ಅಡಿಯಲ್ಲಿ ತಣ್ಣಗೆ ಕಣ್ಮುಚ್ಚ ಬೇಕು ಎನ್ನುತ್ತದೆ. ಮುಖ್ಯವಾಗಿ ಇಲ್ಲಿ ‘ಬೆಚ್ಚಗೆ’ ಎನ್ನುವ ಪದವನ್ನು ಬಳಸಿಲ್ಲ. ನೆಮ್ಮದಿಯಾಗಿ ಕಣ್ಮುಚ್ಚುವುದಲ್ಲ. ತಣ್ಣಗಿನ ಹಿಮಾಲಯದ ಅಡಿಯಲ್ಲಿ ‘ತಣ್ಣಗೆ ಕಣ್ಮುಚ್ಚಿ’ ಮಲಗಿದರೆ ತನ್ನೊಳಗಿನ ಆಕ್ರೋಶ ಎಚ್ಚರವಾಗಿಯೇ ಇರುತ್ತದೆ. ಆಗ ಮತ್ತೆ ಎಚ್ಚತ್ತ ನೀರಾಗಬಹುದು. ಆ ನೀರು ಎಲ್ಲ ಕಡೆ ಹರಿಯಬೇಕು. ನೀರಿನ ಹರಿವಗುಣ ಕ್ರಾಂತಿಯ ಬೀಜವನ್ನು ಎಲ್ಲ ಕಡೆ ಸಾಗಿಸುತ್ತದೆ.

ಇಲ್ಲಿ ನೀರಿನ ಚಲನೆಯನ್ನು, ಬೆಂಕಿಯ ತೀವ್ರತೆಯನ್ನು ಕವಿ ಪದಗಳ ಚಲನೆಯಲ್ಲೂ ತೋರಿಸಿದ್ದಾನೆ. ‘ಉಕ್ಕುವ ಮಳೆ’, ‘ನೆಕ್ಕುವ ಮಳೆ’, ‘ಹರಿವ ಮಳೆ’, – ಇಲ್ಲಿ ಪದಜೋಡಣೆ ಮಳೆಯ ಸಮೃದ್ಧತೆಯನ್ನು ಆವರಿಸುವ ಬಗೆಯನ್ನು ಸೂಚಿಸು ತ್ತದೆ. ಭೂಮಂಡಲವನ್ನು ಆವರಿಸುವ ಗುಣವಿರುವ ಮಳೆಗೆ ‘ಒಡಲ ಮೇಲೆ’ ಹನಿಯಲು ಸಾಧ್ಯವಾಗುತ್ತಿಲ್ಲ ಏಕೆ ಎಂಬುದು ತನ್ನ ಕಾಲದ ಸಮಾನತೆ, ಸಾಮಾಜಿಕ ನ್ಯಾಯದ ಪ್ರಶ್ನೆಗಳನ್ನು ಎತ್ತುತ್ತಿದೆ.

ಪರಿಣಾಮಗಳನ್ನು ತೀವ್ರವಾಗಿಸಲು ಕವಿ ವಿಭಿನ್ನರೂಪಕಗಳನ್ನು ಹೆಣೆಯುತ್ತಾನೆ. ನೀರಿಗೆ ಚಲನಗುಣ, ಎಲ್ಲರನ್ನೂ ಒಳಗೊಳ್ಳುವ ಗುಣ ಇದೆ. ತಂಪಾಗಿಸುವ ಗುಣವೂ ಇದೆ. ಹಸಿರನ್ನು ಕಟ್ಟುವ ಗುಣವೂ ಇದೆ. ಬಿಸಿಲನ್ನು ನೆಕ್ಕುವ ಗುಣವೂ ಇದೆ. ಆದರೆ ಒಡಲಬೇಗೆಯನ್ನು ತಣಿಸುತ್ತಿಲ್ಲ. ಇಲ್ಲಿ ನೀರು, ಮಳೆಯಾಗಿ, ಕಡಲಾಗಿ ಹಸಿರು ನಾಲಗೆಯೂ ಆಗಿದೆ. ಹಾಗೆಯೇ ಘನೀಕರಿಸಿರುವ ಆಲಿಯೂ ಆಗಿದೆ. ಆದರೆ ಆಲಿಕಲ್ಲು ಕಲಿದ್ದಲಾಗಿ ಶಕ್ತಿಯ ರೂಪವಾಗಬೇಕು. ಆ ಶಕ್ತಿಯೂ ಶ್ರಮಿಕರ ಬದುಕಲ್ಲಿ ಸೇರಿಕೊಳ್ಳಬೇಕು ಎಂಬ ಆಶಯವನ್ನು ಧರಿಸಿದೆ. ವಿಜ್ಞಾನತತ್ವ ಮತ್ತು ಪ್ರಕೃತಿತತ್ವವನ್ನೇ ಬುಡಮೇಲು ಮಾಡುವುದನ್ನು ಈ ಕವಿತೆ ಧಾರಣ ಮಾಡಿ ಕೊಂಡಿದೆ. ಕಾರಣ ಮತ್ತು ಪರಿಣಾಮದ ನೆಲೆಗಳನ್ನು ದಮನಿತರ ಮೂಲಕ ಮರುಪ್ರಶ್ನಿಸುತ್ತದೆ. ಆಲಿ ನೀರಾಗಬೇಕಾಗಿರುವುದು ಇದ್ದಿಲಾಗುವುದು ದಮನಿತ ಲೋಕದ ಶಕ್ತ ಪ್ರತಿರೋಧದ ಅಭಿವ್ಯಕ್ತಿ.

**ನನ್ನೊಡಲ ಮೇಲೇಕೆ ಹನಿಯುತ್ತಿಲ್ಲ**
**ಪುಟ್ಟಹೊಟ್ಟೆಯ ಉರಿ ಆರುತ್ತಿಲ್ಲ**
**ಕುಂತವರೂ ನಿಂತವರೂ ಚಿತೆಯಾಗುವರು**
**ಎಚ್ಚೆತ್ತು ನೀರಾಗಿ ಹರಿಯಬೇಕು**

ಈ ನಾಲ್ಕು ಸಾಲುಗಳು ವಿಭಿನ್ನ ಶಕ್ತಿಯನ್ನು ಆವಾಹಿಸುತ್ತವೆ. ಈ ಸಾಲುಗಳನ್ನು ತೆಗೆದು ಓದಿದರೆ ಕವಿತೆ ಪೇಲವವಾಗಿ ಕಾಣುತ್ತದೆ. ಯಾವಾಗ ಸಾಮೂಹಿಕ ನೆಲೆಯನ್ನು ಧರಿಸುತ್ತದೆ ಆಗ ಕವಿತೆಗೆ ಹೊಸದೇ ಆದ ಶಕ್ತಿ ಧಾರಣವಾಗುತ್ತದೆ. ಇಡೀ ಪ್ರಕೃತಿಯನ್ನಷ್ಟೇ ಅಲ್ಲದೆ, ವಸ್ತುನಿಷ್ಠವಾದ ವಿಜ್ಞಾನದ ನೆಲೆಗಳನ್ನೇ ಮತ್ತೆ ವಿಮರ್ಶಿಸಿಕೊಳ್ಳುವಂತೆ ಮಾಡುತ್ತದೆ. ಪ್ರಕೃತಿ, ವಿಜ್ಞಾನಕ್ಕಿಂತಲೂ ಅಗಾಧವಾದುದು ದಮನಿತರ ಸಂಕಟ. ಭೂಮಿಗಿಂತ ಭಾರವಾದುದು, ಆಕಾಶಕ್ಕಿಂತಲೂ ಅಗಲವಾದುದು, ಮಳೆಗಿಂತ ಭೀಕರವಾದುದು, ಉರಿಗಿಂತಲೂ ಭಯಂಕರವಾದುದು ಎಂಬುದನ್ನು ಕವಿತೆ ಮಂಡಿಸುತ್ತಿದೆ. ●